ಇಂದು ದಿನಾಂಕ:25.01.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:** ಪ್ರತಿವಾದಿ 4 ರವರ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:

6. ಪ್ರತಿವಾದಿ 4 ನನ್ನ ತಂದೆಯ ತಂಗಿ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅವುಗಳಲ್ಲಿ ಪ್ರತಿವಾದಿ 4 ರವರಿಗೆ ಯಾವುದೇ ಪಾಲು ನೀಡಿಲ್ಲ ಎಂದರೆ ಸರಿ. ಪಾಲಾಗುವ ಪೂರ್ವದಲ್ಲಿ ದಾವಾ ಷೆಡ್ಯೂಲ್ 2 ನೇ ಆಸ್ತಿಯನ್ನು ಪ್ರತಿವಾದಿ 4 ಗೆ ಕೊಡವುದಾಗಿ ಕರಾರು ಪತ್ರವಾಗಿತ್ತು ಎಂದರೆ ಸರಿ. ವಿಭಾಗದ ಕಾಲಕ್ಕೆ ಪ್ರತಿವಾದಿ 4 ರವರಿಗೆ ಸೇರಬೇಕಾದ ದಾವಾ ಷೆಡ್ಯೂಲ್ 2 ಸ್ವತ್ತನ್ನು ನನ್ನ ತಂದೆ ಅವರ ಪಾಲಿಗೆ ಉಳಿಸಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆ ತಮ್ಮ ಜೀವಿತಾವದಿಯಲ್ಲಿ ಆ ಆಸ್ತಿಯನ್ನು ಪ್ರತಿವಾದಿ 4 ಯೊಂದಿಗೆ ಜಂಟಿ ಸ್ವಾಧೀನ ಹೊಂದಿ ಅನುಭವಿಸುತ್ತಿದ್ದರು ಎಂದರೆ ಸರಿ. ಸದರಿ ದಾವಾ ಷೆಡ್ಯೂಲಿ 2 ನೇ ಆಸ್ತಿಯನ್ನು ಪ್ರತಿವಾದಿ 4 ರವರ ಹಿಸ್ಸೆಗೆ ನನಗೆ ತೊಂದರೆ ಇಲ್ಲ ಎಂದರೆ ಸರಿ.

**ಮರು ವಿಚಾರಣೆ:** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ